ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು
Crl.Misc. No.231/2018.
ದಿನಾಂಕಃ**25.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

<u>ಮುಂದುವರೆದ ಪಾಟೀ ಸವಾಲುಃ</u>- ಎದುರುದಾರರ ಪರ ಶ್ರೀ ಹೆಚ್ ವಿ ಜಿ ವಕೀಲರಿಂದಃ-

ನಾನು ಕ್ಯಾಪ್ಕೋ ಲಿ. ಬೀರೂರು ಇಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆಯನ್ನು ನನ್ನ ಕಂಪೆನಿಯವರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿ.ಎಫ್.ನಂ.KN/5878/14889 ನನ್ನದೇ ಆಗಿರುತ್ತದೆ. ಈಗ ನೋಡುತ್ತಿರುವ ನನ್ನ ವೇತನ ದೃಢೀಕರಣ ಪತ್ರದ ದಾಖಲೆ ಎಂದರೆ ಸರಿ. ಸದರಿ ದಾಖಲೆಯನ್ನು ನಿ ಆರ್ 1 ಎಂದು ಗುರುತಿಸಲಾಯಿತು. ನನಗೆ ವೇತನವು ಕೆನರಾ ಬ್ಯಾಂಕ್ ಯು ಬಿ ರಸ್ತೆ ಕಡೂರು ಶಾಖೆಯ ಖಾತೆಗೆ ಬರುತ್ತದೆ ಎಂದರೆ ಸರಿ. ನನಗೆ 2018 ರಿಂದಲೂ ವೇತನ ಬರುತ್ತಿದೆ ಎಂದರೆ ಸರಿಯಲ್ಲ. ನನಗೆ ಎದುರುದಾರರು ಬಿಟ್ಟ ನಂತರ ಕೆಲಸಕ್ಕೆ ಹೋಗಲು ಪ್ರಾರಂಭಿಸಿರುತ್ತೇನೆ.

ಕೆನರಾ ಬ್ಯಾಂಕ್ ನವರು 2019 ರಿಂದ ಕ್ಯಾಪ್ಕೋ ಲಿ. ಕಂಪನಿಯಿಂದ ವೇತನ ಜಮಾ ಆಗಿರುವ ಬಗ್ಗೆ ನನ್ನ ಬ್ಯಾಂಕ್ ಖಾತಾ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿರುತ್ತಾರೆ ಎಂದರೆ ನಾನು 2019 ರಲ್ಲಿ ಕೆಲಸಕ್ಕೆ ಹೋಗಿರಲಿಲ್ಲ. ಈಗ ನೋಡುತ್ತಿರುವ ಬ್ಯಾಂಕ್ ಸ್ಟೇಟ್ ಮೆಂಟ್ ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಆಗಿರುತ್ತದೆ. ಸದರಿ ಸ್ಟೇಟ್ ಮೆಂಟ್ ಅನ್ನು ನಿ ಆರ್ 2 ಎಂದು ಗುರುತಿಸಲಾಯಿತು. ಸದರಿ ಸ್ಟೇಟ್ ಮೆಂಟ್ ಪ್ರಕಾರ ನನಗೆ 2019 ರಿಂದ ಪ್ರತಿ ತಿಂಗಳು ಸಂಬಳದ ಹಣ ಬರುತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಎದುರುದಾರರು ಬಿಟ್ಟ ನಂತರ ಕೆಲಸಕ್ಕೆ ಹೋಗಿರುತ್ತೇನೆ.

2019 ರಿಂದ 2023 ರ ವರೆಗೂ ನನಗೆ ಬಂದ ಪ್ರತಿ ತಿಂಗಳ ಸಂಬಳವನ್ನು ಉಳಿತಾಯ ಮಾಡಿಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ03.10.2023 ರ ವರೆಗೂ ನನ್ನ ಬ್ಯಾಂಕಿನಲ್ಲಿ ರೂ.2,54,280/- ಹಣ ಇತ್ತು ಎಂದರೆ ಸರಿ. ಈ ಹಿಂದೆ ನಾನು ಪಾಟೀ ಸವಾಲು ಮಾಡಿದ ನಂತರ ನಾನು ದಿಃ21.11.2023 ರಂದು ರೂ.2,60,000/- ಹಣವನ್ನು ಬ್ಯಾಂಕಿನಿಂದ ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ಖರ್ಚಿಗಾಗಿ ತೆಗೆದಿರುತ್ತೇನೆ. ನನಗೆ ಜಾಸ್ತಿ ಖರ್ಚು ಇಲ್ಲದೇ ಇದ್ದ ಕಾರಣ ನಾನು ಸದರಿ ಹಣವನ್ನು ಠೇವಣಿ ಮಾಡಿ ಉಳಿತಾಯ ಮಾಡಿಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ತವರಿನಲ್ಲಿ ತಂದೆಯ ಸ್ವಂತ ಮನೆಗಳು ಇರುವುದರಿಂದ ಸದರಿ ಮನೆಗಳಿಂದ ಬರುವ ಬಾಡಿಗೆ ಹಣದಿಂದ ನಾನು ಜೀವನ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನೇ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ.

ಅರಸೀಕೆರೆ ನ್ಯಾಯಾಲಯದಲ್ಲಿ ಎದುರುದಾರರು ನನ್ನ ವಿರುದ್ಧ ವಿವಾಹ ವಿಚ್ಛೇಧನ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ವಿಚ್ಛೇಧನ ಅರ್ಜಿ ಊರ್ಜಿತಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ವಕೀಲರು ಮಾಹಿತಿ ನೀಡದೆ ಅದು ಆದೇಶವಾಗಿದ್ದು ನನಗೆ 1 ತಿಂಗಳ ನಂತರ ಗೊತ್ತಾಗಿರುತ್ತದೆ. ನಾನು ಅದರ ಮೇಲೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಆದೇಶದಂತೆ ಎದುರುದಾರರು ನ್ಯಾಯಾಲಯಕ್ಕೆ 2 ಲಕ್ಷ ಹಣವನ್ನು ಠೇವಣಿ ಮಾಡಿ ಅದರ ಮಾಹಿತಿಯನ್ನು ನನಗೆ ಅರ್ಜಿಯ ಮೂಲಕ ಕಳುಹಿಸಿರುತ್ತಾರೆ ಎಂದರೆ ಸರಿ. ಈಗ ನೋಡುತ್ತಿರುವ ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ನನ್ನದು, ಅದನ್ನು ನಿ ಆರ್ 3 ಎಂದು ಸಾಕ್ಷಿಯ ಸಹಿಯನ್ನು ನಿ ಆರ್ 3 ಎ ಎಂದು ಗುರುತಿಸಲಾಯಿತು.

ನಿಪಿ 6, 8 ರ ಪಹಣಿಯು ನನ್ನ ಮಾವನ ಹೆಸರಿನಲ್ಲಿ ಇದೆ. ನಿಪಿ 6, 8 ರಲ್ಲಿ ನಾರಾಯಣ ಬಿನ್ ಶಿವಣ್ಣ ಎಂದು ನಮೂದು ಇದೆ ಎಂದರೆ ಸರಿ, ಅವರು ನನ್ನ ಮಾವ. ನಿಪಿ6, 8 ರಲ್ಲಿ ನಮೂದು ಇರುವ ನಾರಾಯಣರವರಿಗೂ ಎದುರುದಾರರ ತಂದೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪಾಟೀ ಸವಾಲಿನ ಪ್ರಶ್ನೆಗಳನ್ನು ಕೇಳಲು ವಕೀಲರು ತುಂಬಾ ಕಾಲವಕಾಶ ತೆಗೆದುಕೊಳ್ಳುತ್ತಿದ್ದ ಕಾರಣ ಪಾಟೀ ಸವಾಲು ಮಾಡಲು ಕಾಲವಕಾಶ ನೀಡಿ ಮುಂದೂಡಲಾಗಿರುತ್ತದೆ ಹಾಗೂ ಮುಂದಿನ ದಿನಾಂಕದಂದು ವಕೀಲರು ಪಾಟೀ ಸವಾಲಿಗೆ ತಯಾರು ಆಗಿ ಬರುವಂತೆ ನಿರ್ದೇಶಿಸಲಾಗಿರುತ್ತದೆ.

ಮರು ವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.